ಸಾಕ್ಷಿಯನ್ನು ದಿನಾಂಕ : **25-07-2025** ರಂದು ಪುನಃ ಕರೆದು ಪ್ರಮಾಣ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ನಂ.1 ರಿಂದ 4 ರವರ ಪರ ಶ್ರೀ.ಎಸ್.ಟಿ.ಎಮ್ ವಕೀಲರಿಂದಃ**

ನನ್ನ ದೊಡಪ್ಪನ ಹೆಸರು ಲಕ್ಷ್ಮಪ್ಪ ಎಂದರೆ ಸರಿ. ಈಗ ಸಾಕ್ಷಿಗೆ ಒಂದು ನೊಂದಾಯಿತ ಮೃತ್ಯ ಪತ್ರವನ್ನು ತೋರಿಸಿ ಅದರ ಮೇಲೆ ಕಾಣುವ ಭಾವಚಿತ್ರ ಲಕ್ಷ್ಮಪ್ಪ ಇವರದು ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಮೃತ್ಯು ಪತ್ರವನ್ನು ಈಗ ನಿಡಿ-1 ಎಂದು ಗುರುತಿಸಲಾಯಿತು. ನನ್ನ ದೊಡಪ್ಪ ಲಕ್ಷ್ಮಪ್ಪ ಇವನು ಮೃತ್ಯು ಪತ್ರವನ್ನು ಹನಮಪ್ಪ ಅಪ್ಪಾಸಾಬ ಪಂಚಗಾಂವಿ ಇವರ ಹೆಸರಿನಲ್ಲಿ ಬರೆದಿರುತ್ತಾನೆ ಎಂದರೆ ಸರಿಯಲ್ಲ. ನಿಡಿ-1 ನೊಂದಾಯಿತ ಮೃತ್ಯು ಪತ್ರದ ಪ್ರಕಾರ ಲಕ್ಷ್ಮಪ್ಪ ಇವನು ಬರಗಿ ಗ್ರಾಮದ ಮನೆ ನಂ.316 ನ್ನು ಪ್ರತಿವಾದಿ ನಂ.2 ರವರ ಹೆಸರಿನಲ್ಲಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಾನು ಮತ್ತು ಪ್ರತಿವಾದಿ ನಂ.1 ರಿಂದ 3 ಹಾಗೂ ನಮ್ಮ ತಂದೆ ಕೂಡಿಕೊಂಡು ಮನೆ ನಂ.495 ನ್ನು ಗೊವಿಂದಪ್ಪ ಮಾರುತಿ ಪೂಜಾರಿ ಇವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಒಂದು ಖರೀದಿ ಪತ್ರದ ದೃಡಿಕೃತ ಪ್ರತಿಯನ್ನು ತೋರಿಸಿ ಅದರ ಮೇಲೆ ನಿಮ್ಮ ಭಾವಚಿತ್ರ ಇರುತ್ತದೆ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಆದ್ದರಿಂದ ಸದರಿ ಖರೀದಿ ಪತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ಖರೀದಿ ಪತ್ರದ ಮೇಲೆ ನನ್ನ ಸಹಿ ಇರುತ್ತದೆ. ಸಾಕ್ಷಿ ಮುಂದುವರೆದು ಮೊಸ ಮಾಡಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಖರೀದಿ ಪತ್ರ ಆಗುವ ಸಮಯದಲ್ಲಿ ನಾನು ವಯಸ್ಕರನು ಇದ್ದೇನು ಹಾಗೂ ನನಗೆ ತಿಳುವಳಿಕೆ ಇತ್ತು. ನಿಡಿ-2 ಖರೀದಿ ಪತ್ರದ ಮೇಲೆ ಇರುವ ವಿಷಯಗಳನ್ನು ಗೊತ್ತು ಮಾಡಿಕೊಂಡು ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ-2 ಖರೀದಿ ಪತ್ರದಲ್ಲಿರುವ ಮನೆ ಆಸ್ತಿ ನಂ.495 ಇದು ನಮ್ಮ ತಂದೆಯಾದ ಅಪ್ಪಾಸಾಬ ಇವನ ಹೆಸರಿನಲ್ಲಿ ಇತ್ತು ಎಂದರೆ ಸರಿ. ನಾನು, ಪ್ರತಿವಾದಿ ನಂ.1 ರಿಂದ 3 ಮತ್ತು ನನ್ನ ತಂದೆ ನಮಗೆ ಅಡಚಣೆ ಇದ್ದುದ್ದರಿಂದ ಸದರಿ ಮನೆ ಆಸ್ತಿ ನಂ.495 ನ್ನು ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಮನೆ ನಂ.5 ಇದು ಇನ್ನೂ ನಮ್ಮ ತಂದೆಯಾದ ಅಪ್ಪಾಸಾಬ ಇವರ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಗ್ರಾಮದಲ್ಲಿ ಈಗ ನಮಗೆ ಸೇರಿದ ಮನೆ ನಂ.5 ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನಮ್ಮ ತಂದೆ ಅಪ್ಪಾಸಾಬ ಇವರ ಹೆಸರಿನಲ್ಲಿ ಬರಗಿ ಗ್ರಾಮದಲ್ಲಿ ಮನೆ ನಂ.495 ಸಹ ಇರುತ್ತದೆ. ಮನೆ ನಂ.5 ನ್ನು ಬಿಟ್ಟು ನನಗೆ ಬೇರೆ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲ ಮಾಹಿತಿ ಇದ್ದರೂ ಸಹಿತ ಮಾಹಿತಿ ಇರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮನೆ ನಂ.5 ನ್ನು ಬಿಟ್ಟು ಬರಗಿ ಗ್ರಾಮದಲ್ಲಿ ನಮ್ಮ ತಂದೆಯ ಹೆಸರಿನಲ್ಲಿ ಈಗ ಬೇರೆ ಯಾವದೇ ಆಸ್ತಿಗಳು ಇಲ್ಲದೆ ಇದ್ದರೂ ಸಹಿತ ನಾನು ಸುಳ್ಳು ದಾವೆಯನ್ನು ಸಲ್ಲಿಸಿ ಈಗ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಪ್ರತಿವಾದಿ ನಂ.5 ರವರ ಪರ ಶ್ರೀ ಕೆ.ಎಮ್.ಕೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಮುಧೋಳ.

ಸಾಕ್ಷಿಯ ಸಹಿಃ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2025.09.08 12:03:01 +0530